ಆ ಜೇಬಿನಿಂದ ಹೊರಬಂದ ಕೈ ಯಾರೋ ಬೆಂಕಿ ಹತ್ತಿಸಿರುವಂತೆ ಉರಿಯುತ್ತಿದೆ! ಆ ವ್ಯಕ್ತಿ ಅದೇ ಉರಿಯುವ ಕೈಗಳಿಂದ ತನ್ನ ಸಿಗರೇಟ್ ಹಚ್ಚಿದ. ಆ ಬೆಳಕು ಅವನ ಮುಖದ ಮೇಲೆ ಬಿದ್ದಿತು. ಆಗ ರವಿಗೆ ಅವನ ಮುಖ ಕಾಣಿಸಿತು. ಮುಖದಲ್ಲಿ ಯಾವುದೇ ಚರ್ಮವಿಲ್ಲ! ಇಡೀ ಮುಖ ಸುಟ್ಟು ಕರಕಲಾದಂತಾಗಿದೆ. ಬಲಗಡೆ ಕೆನ್ನೆಯ ಬಳಿ, ಆಳವಾದ ಸುಟ್ಟ ಗಾಯದ ಗುಳಿ... ಅದರಿಂದ ದವಡೆಯ ಹಲ್ಲುಗಳು ಕಾಣುತ್ತಿವೆ. ಅವೂ ತನ್ನ ಹೊಳಪನ್ನು ಕಳೆದುಕೊಂಡು ಕಪ್ಪಾಗಿವೆ. ಕುತ್ತಿಗೆ ಇರುವ ಜಾಗದಲಿ ಕೇವಲ ಮೂಳೆಗಳು. ಕಣ್ಣುಗಳು ಇರುವ  ಜಾಗದಲ್ಲಿ ರಕ್ತವರ್ಣದ ಗುಡ್ಡೆಗಳು... ಅದರಲ್ಲಿ ಆ ಬೆಂಕಿಯಬಿಂಬ!

ಆ ವ್ಯಕ್ತಿಯ ಬಾಯಲ್ಲಿದ್ದ ಸಿಗರೇಟನ್ನು ಕಚ್ಚಿ ಹಿಡಿದಿದ್ದ ಎರಡು ಹಲ್ಲುಗಳೂ ಕಪ್ಪಾಗಿ ಇನ್ನೇನು ಪುಡಿ ಪುಡಿ ಆಗುವಂತೆ ಇದ್ದವು. ಅದೇ ಬಾಯಿಂದ ಆ ವ್ಯಕ್ತಿ ಸಿಗರೇಟಿನ ಹೊಗೆ ಎಳೆದ. ಆ ಹೊಗೆ ಸೀದಾ ಶ್ವಾಸಕೋಶ ಸೇರಿ ಅಲ್ಲಿ ಒಂದೆರಡು ಕ್ಷಣ ಇದ್ದು, ಹೊರಬಂದಿತು. ಆ ಇಡೀ ದೃಶ್ಯಾವಳಿಯನ್ನು ರವಿ ನೋಡುತ್ತಿದ್ದ. ಭಯದಿಂದ ಅವನ ದೇಹವೆಲ್ಲ ತಣ್ಣಗಾಯಿತು. ಬಾಯಲ್ಲಿದ್ದ ಸಿಗರೇಟ್ ಕೆಳಗೆ ಬಿದ್ದಿತು. ಬಾಯಿ ತೆರೆದಂತೆಯೇ ಇತ್ತು. ಒಂದು ಕ್ಷಣ ಅಲ್ಲಿ ಏನು ಆಗುತ್ತಿದೆ ಅನ್ನುವುದೂ ತಿಳಿಯದೇ ಮಂಕು ಆವರಿಸಿತು.

"ಸಾರ್... ಸಾರ್... ಏನಾಯಿತು?..'' ಎನ್ನುವ ಮಾತಿಗೆ ಮತ್ತೆ ಇಹಲೋಕಕ್ಕೆ ಬಂದ ರವಿ. ತಾನು ಎಲ್ಲಿದ್ದೀನಿ ಎಂದು ತಿಳಿಯಲು ಸುತ್ತಮುತ್ತ ನೋಡಿದ. ಆಗ ಅವನಿಗೆ ಅರಿವಾಗಿದ್ದು, ತಾನು ಇನ್ನೂ ಅದೇ ಜಾಗದಲ್ಲಿ ಇದ್ದೀನಿ, ಇನ್ನೂ ನಿಂತೇ ಇದ್ದೀನಿ... ತನ್ನನ್ನು ಎಬ್ಬಿಸಿದ್ದು ಆ ವ್ಯಕ್ತಿಯೇ ಎಂದು.

'ಅಂದರೆ ಆ ಉರಿಯುವ ಕೈ... ಅರ್ಧ ಸುಟ್ಟ ತಲೆ, ಸಿಗರೇಟಿನ ಹೊಗೆ ಶ್ವಾಸಕೋಶದವರೆಗೂ ಹೋಗಿ ಬಂದ ದೃಶ್ಯ... ಎಲ್ಲ ಭ್ರಮೆಯಾ?'

"ಏನಾಯ್ತು ಸರ್... ಯಾಕೆ ಸಿಗರೇಟ್ ಬೀಳಿಸಿಕೊಂಡಿರಿ?"

"ಏನಿಲ್ಲ, ಏನಿಲ್ಲ..."ಎನ್ನುತ್ತಾ ತನ್ನ ಜೇಬಿನಿಂದ ಇನ್ನೊಂದು ಸಿಗರೇಟ್ ತೆಗೆದು ಬಾಯಲ್ಲಿ ಇಟ್ಟುಕೊಂಡ.

"ಲೈಟರ್ ಕೊಡಲಾ..." ಎನ್ನುತ್ತಾ ಆ ವ್ಯಕ್ತಿ ಜೇಬಿಗೆ ಕೈ ಹಾಕಿದ. ಭಯದಿಂದ ರವಿ, "ಬೇಡ ಬೇಡ... ನಿಮ್ಮ ಸಿಗರೇಟ್‌ನಿಂದಲೇ ಹಚ್ಚಿಕೊಳ್ಳುತ್ತೇನೆ..." ಅವನ ಕಾಲು ಇನ್ನೂ ನೋಯುತ್ತಿತ್ತು. ಹೆಜ್ಜೆ ಎತ್ತಿ ಇಡಲೂ ಆಗುತ್ತಿಲ್ಲ...

"ನೀವೇನು ಸಾರ್... ಈ ರಾತ್ರಿಯಲ್ಲಿ?"

"ನಾನೂ ಅದೇ ಪ್ರಶ್ನೆ ಕೇಳಬೇಕೆಂದಿದ್ದೆ..." ರವಿ ಸಿಗರೇಟನ್ನು ಹಚ್ಚಿಕೊಳ್ಳುತ್ತಾ ಹೇಳಿದ.

"ನಾನು ಬೈಚಾಪುರ ಕ್ರಾಸ್ ಹತ್ತಿರ ಸೀದಾ ಹೋಗಬೇಕಿತ್ತು. ತಪ್ಪಿ ತಿರುಗಿದೆ, ಈ ಕಡೆ ಬಂದೆ. ಕಾರಿನ ಎರಡೂ ಟೈರ್ ಪಂಚರ್ ಆಯಿತು. ಅಲ್ಲಿ ಯಾರೋ ಹೇಳಿದರು, ಮಾಳ್ಯಾದಲ್ಲಿ ಯಾರೋ ಪಂಚರ್ ಹಾಕೋರು ಇದ್ದಾರೆ ಅಂತ, ಅದಕ್ಕೇ ಈ ಕಡೆ ನಡೆದು ಬಂದೆ. ನೀವು ಸಿಕ್ಕಿದಿರಿ.''

'ಆ ಬೈಚಾಪುರ ಕ್ರಾಸ್ ಬಳಿ ಒಬ್ಬ ಮುಸಲ್ಮಾನರವನು ಪಂಚರ್ ಶಾಪ್ ಇಟ್ಟುಕೊಂಡಿದ್ದ... ಅವನು ಅಲ್ಲಿಯೇ 24 ಗಂಟೆ ಇರುತ್ತಿದ್ದ... ಎಲ್ಲಿಹೋದ ಅವನು?' ರವಿ ಮನಸ್ಸಿನಲ್ಲಿಯೇ ಅಂದುಕೊಂಡ.

"ನಾನು ಹುಣಸೇನ ಹಳ್ಳಿಯವನು... ಬೈಕ್ ಸ್ಕಿಡ್ ಆಗಿ ಬಿದ್ದು ಹೋಯ್ತು. ಬನ್ನಿ, ಮಾಳ್ಯಾಕ್ಕೆ ಹೋದರೆ ಏನಾದರೂ ವ್ಯವಸ್ಥೆ ಮಾಡಬಹುದು." ಹೆಜ್ಜೆ ಎತ್ತಿ ಇಡಲು ಪ್ರಯತ್ನಿಸಿದ ರವಿ. ಎತ್ತಿಡಲು ಆಗದಂಥ ನೋವು. ಆ ಅಂಧಕಾರದಲ್ಲಿ ಬರೀ ಎರಡು ಸಿಗರೇಟಿನ ಬೆಂಕಿಯ ಕಣಗಳು ಮಾತ್ರ!